**PREVENT**
GLOBAL
HPV CANCERS



# HPV ಲಸಿಕೆ ಬಗ್ಗೆ ತಂದೆ - ತಾಯಿಯರೊಂದಿಗೆ ಪರಿಣಾಮಕಾರಿಯಾಗಿ ಮಾತುಕತೆ ನಡೆಸಿ.

## ವೈದ್ಯರು ಏನು ಹೇಳುತ್ತಾರೆ ಎಂಬುದು ಮುಖ್ಯ; ವೈದ್ಯರು ಹೇಗೆ ಹೇಳುತ್ತಾರೆ ಎಂಬುದು ಅದಕ್ಕಿಂತ ಮುಖ್ಯ.

ಅನೇಕ ತಂದೆ - ತಾಯಂದಿರು ತಮ್ಮ ಹೆಣ್ಣುಮಕ್ಕಳಿಗೆ HPV ಲಸಿಕೆ ಹಾಕಿಸಲು ಒಪ್ಪುವುದು, ವೈದ್ಯರು ಲಸಿಕೆಯನ್ನು ಶಿಫಾರಸು ಮಾಡಿದ ನಂತರ ಮತ್ತು ಪೋಷಕರ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರಿಸಿದ ನಂತರ.

---

**ನೀವು ಇತರ ಲಸಿಕೆಗಳನ್ನು ಶಿಫಾರಸು ಮಾಡುವ ರೀತಿಯಲ್ಲಿಯೇ HPV ಲಸಿಕೆಗಳನ್ನೂ ಶಿಫಾರಸು ಮಾಡಿ.**

ನೀವು ಏನು ಹೇಳಬಹುದೆಂದರೆ,

“ಈಗ ನಿಮ್ಮ ಮಗಳು 9 ವರ್ಷ ವಯಸ್ಸಿನವಳಾಗಿದ್ದಾಳೆ, ಅವಳು ಗರ್ಭಕಂಠದ ಮತ್ತು ಇತರ HPV ಸಂಬಂಧಿತ ಕ್ಯಾನ್ಸರ್‌ಗಳ ಲಸಿಕೆಗೆ ಅರ್ಹಳಾಗಿದ್ದಾಳೆ. ಇದು ಅವಳ ಆರೋಗ್ಯಕ್ಕೆ ಬಹಳ ಮುಖ್ಯ. ನಾನು ನಿಮಗೆ ಅವಳ ಮೊದಲ ಲಸಿಕೆ ತೆಗೆದುಕೊಳ್ಳಲು ವೈದ್ಯರೊಂದಿಗೆ ಸಮಾಲೋಚಿಸಲು ಶಿಫಾರಸು ಮಾಡುತ್ತೇನೆ.”

ನಿಮ್ಮ ಸಲಹೆಯ ನಂತರವೂ ತಂದೆ - ತಾಯಂದಿರು ಹಿಂಜರಿಯುತ್ತಿದ್ದರೆ, ನೀವು ಅವರನ್ನು ಏನು ಕೇಳಬೇಕೆಂದರೆ

"ನಿಮಗೆ ಯಾವ ವಿಷಯದ ಬಗ್ಗೆ ಚಿಂತೆಯಾಗುತ್ತಿದೆ ಎಂದು ನನಗೆ ಹೇಳಿ?"

---

**ಕೆಳಗಿನ ಉತ್ತರಗಳನ್ನು ಬಳಸಿಕೊಂಡು ಮೊದಲಿನಿಂದಲೂ ತಂದೆ - ತಾಯಂದಿರ ಪ್ರಶ್ನೆಗಳು ಮತ್ತು ಕಾಳಜಿಗಳನ್ನು ಪರಿಹರಿಸಿ.**

### ನನ್ನ ಮಗುವಿಗೆ HPV ಲಸಿಕೆ ಏಕೆ ನೀಡಬೇಕು?

HPV ಚುಚ್ಚುಮದ್ದು ಬಹಳ ಮುಖ್ಯ ಏಕೆಂದರೆ ಇದು ನಿಮ್ಮ ಮಗಳನ್ನು HPV ಸೋಂಕಿನಿಂದ ರಕ್ಷಿಸುತ್ತದೆ, ಇದು ಅವಳು ಬೆಳೆದಾಗ ಗರ್ಭಕಂಠ ಮತ್ತು ಇತರ ನಾಲ್ಕು ರೀತಿಯ ಕ್ಯಾನ್ಸರ್ (ಗಂಟಲು, ಯೋನಿ,  ಹೊರಜನನಾಂಗ ಮತ್ತು ಗುದದ್ವಾರ) ಗಳಿಂದ ಅವಳನ್ನು ರಕ್ಷಿಸುತ್ತದೆ. 9-14 ವರ್ಷಗಳಲ್ಲಿ ಲಸಿಕೆ ಹಾಕಿಸುವುದು ಅತ್ಯುತ್ತಮ ರಕ್ಷಣೆಯನ್ನು ನೀಡುತ್ತದೆ.

### ಆದರೆ ಇಷ್ಟು ಚಿಕ್ಕ ವಯಸ್ಸಿನಲ್ಲಿ HPV ಲಸಿಕೆಯನ್ನು ಏಕೆ ಪಡೆಯಬೇಕು?

9 ರಿಂದ 14 ವರ್ಷ ವಯಸ್ಸಿನ ನಡುವೆ HPV ಲಸಿಕೆಯನ್ನು ನೀಡಿದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಏಕೆಂದರೆ ಮಕ್ಕಳಿಗೆ ತಮ್ಮ ಚಿಕ್ಕ ವಯಸ್ಸಿನಲ್ಲೇ ಈ ಲಸಿಕೆಯನ್ನು ನೀಡಿದರೆ ಸೋಂಕಿನಿಂದ ಉತ್ತಮ ರಕ್ಷಣೆ ಸಿಗುತ್ತದೆ. ಸಂಶೋಧನೆಗಳ ಪ್ರಕಾರ, ಸರಿಯಾದ ಸಮಯದಲ್ಲಿ HPV ಕ್ಯಾನ್ಸರ್ ವಿರುದ್ಧ ಲಸಿಕೆಯನ್ನು ಪಡೆಯುವುದರಿಂದ ಹೆಚ್ಚಿನ ರಕ್ಷಣೆ ಲಭ್ಯವಾಗುತ್ತದೆ, ಆದರೆ ವಯಸ್ಸಾದ ನಂತರ ತಡವಾಗಿ ಲಸಿಕೆ ಹಾಕಿಸುವುದರಿಂದ ಕಡಿಮೆ ರಕ್ಷಣೆ ಸಿಗುತ್ತದೆ.

### ನನ್ನ ಮಗಳು HPV ಲಸಿಕೆಯ ಚುಚ್ಚುಮದ್ದನ್ನು ಎಷ್ಟು ಬಾರಿ ಪಡೆಯಬೇಕು?

‘9-14 ವರ್ಷ ವಯಸ್ಸಿನ ಹುಡುಗಿಯರು 2 ಡೋಸ್ ತೆಗೆದುಕೊಳ್ಳಬೇಕು.' ರೋಗಗಳ ವಿರುದ್ಧ ಹೋರಾಡುವ ಶಕ್ತಿ ಇಲ್ಲದ, ಎಚ್ಐವಿಯಿಂದ ಬಳಲುತ್ತಿರುವ ಅಥವಾ 15 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ 3 ಡೋಸ್ ನೀಡಬೇಕು.

### HPV ಲಸಿಕೆ ಸುರಕ್ಷಿತವೇ?

ಹೌದು. HPV ಲಸಿಕೆಯು ಟೆಟನಸ್ ಲಸಿಕೆಯಂತೆ ಸುರಕ್ಷಿತವಾಗಿದೆ.

HPV ಲಸಿಕೆಯನ್ನು 100 ಕ್ಕೂ ಹೆಚ್ಚು ದೇಶಗಳಲ್ಲಿ ಲಕ್ಷಾಂತರ ಮಕ್ಕಳಿಗೆ ಸುರಕ್ಷಿತವಾಗಿ ನೀಡಲಾಗಿದೆ. ಈ ಲಸಿಕೆ ಮಾರುಕಟ್ಟೆಯಲ್ಲಿ ಹೆಚ್ಚು ಅಧ್ಯಯನ ಮಾಡಲಾದ ವ್ಯಾಕ್ಸಿನೇಷನ್ ಆಗಿದೆ ಮತ್ತು ಈ ಅಧ್ಯಯನಗಳು ಇದು ತುಂಬಾ ಸುರಕ್ಷಿತವಾಗಿದೆ ಎಂದು ತೋರಿಸುತ್ತವೆ.

---

ವಿತರಣೆ:

## HPV ಲಸಿಕೆಯಿಂದ ಯಾವುದೇ ಅಡ್ಡಪರಿಣಾಮಗಳಿವೆಯೇ?

HPV ಲಸಿಕೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ. HPV ಲಸಿಕೆ ನೀಡಿದಾಗ ಇತರ ಲಸಿಕೆಗಳಂತೆ, ಜ್ವರ, ತಲೆನೋವು, ನೋವು ಮತ್ತು ಇಂಜೆಕ್ಷನ್ ಕೊಟ್ಟ ಸ್ಥಳದಲ್ಲಿ ಕೆಂಪಗಾಗುವುದು ಇತ್ಯಾದಿ ಉಂಟುಮಾಡಬಹುದು ಲಸಿಕೆ ಹಾಕಿದ ನಂತರ ಕೆಲವೇ ಕೆಲವು ಮಕ್ಕಳು ಮಾತ್ರ ತಲೆತಿರುಗುವಿಕೆಯನ್ನು ಅನುಭವಿಸಬಹುದು. ಆದ್ದರಿಂದ ಲಸಿಕೆ ಪಡೆದ ನಂತರ ನಾವು ನಿಮ್ಮ ಮಗುವನ್ನು ಸುಮಾರು 15 ನಿಮಿಷಗಳ ಕಾಲ ಕುಳಿತುಕೊಳ್ಳಲು ಹೇಳುತ್ತೇವೆ .

## HPV ಲಸಿಕೆ ನನ್ನ ಮಗಳ ಫಲವತ್ತತೆಯ ಅಂದರೆ ಫರ್ಟಿಲಿಟಿಯ ಮೇಲೆ ಪರಿಣಾಮ ಬೀರುತ್ತದೆಯೇ?

HPV ವ್ಯಾಕ್ಸಿನೇಷನ್ ಫಲವತ್ತತೆಯ ಸಮಸ್ಯೆಗಳನ್ನು ಉಂಟುಮಾಡುವುದಿಲ್ಲ. ವಾಸ್ತವವಾಗಿ, HPV ಸರ್ವೈಕಲ್ ಪ್ರಿ ಕ್ಯಾನ್ಸರ್ ಅಂದರೆ ಗರ್ಭಕಂಠದ ಪೂರ್ವ ಕ್ಯಾನ್ಸರ್ ಮತ್ತು ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಿಸಿದ ತೊಡಕುಗಳನ್ನು ತಡೆಗಟ್ಟುವ ಮೂಲಕ ಫಲವತ್ತತೆಯನ್ನು ಅಂದರೆ ಫರ್ಟಿಲಿಟಿಯನ್ನು ರಕ್ಷಿಸಲು ಸಹಾಯ ಮಾಡುತ್ತದೆ.

## HPV ಯಿಂದ ಯಾವ ಕ್ಯಾನ್ಸರ್ ಉಂಟಾಗುತ್ತದೆ?

HPV, ಅಥವಾ ಹ್ಯೂಮನ್ ಪ್ಯಾಪಿಲೋಮಾ ವೈರಸ್, ಒಂದು ಸಾಮಾನ್ಯ ವೈರಸ್ ಆಗಿದ್ದು, ಆರು ವಿಧದ ಕ್ಯಾನ್ಸರ್‌ಗೆ ಕಾರಣವಾಗಬಹುದು. ಉದಾಹರಣೆಗೆ, ಮಹಿಳೆಯರಲ್ಲಿ, HPV ಸರ್ವೈಕಲ್, ಗಂಟಲು, ಗುದದ್ವಾರ, ಯೋನಿ ಮತ್ತು ಹೊರಜನನಾಂಗ ಕ್ಯಾನ್ಸ್ ರ್ ಗೆ ಕಾರಣವಾಗಬಹುದು ಮತ್ತು ಪುರುಷರಲ್ಲಿ, HPV ಗಂಟಲು, ಗುದ ಮತ್ತು ಶಿಶ್ನ ಕ್ಯಾನ್ಸರ್ಗೆ ಕಾರಣವಾಗಬಹುದು.

## ನನ್ನ ಮಗು ನಿಜವಾಗಿಯೂ HPV ಸೋಂಕಿನ ಅಪಾಯದಲ್ಲಿದೆಯೇ?

HPV ಒಂದು ಬಹಳ ಸಾಮಾನ್ಯವಾದ ಸೋಂಕು. ಜೀವನದ ಯಾವುದಾದರೂ ಹಂತದಲ್ಲಿ, ಬಹುತೇಕ ಎಲ್ಲರೂ HPV ಸೋಂಕಿಗೆ ಒಳಗಾಗುತ್ತಾರೆ. ಸರಿಯಾದ ಸಮಯದಲ್ಲಿ HPV ಲಸಿಕೆ ಹಾಕಿಸುವುದರಿಂದ, ನಿಮ್ಮ ಮಗಳು ಬೆಳೆದಾಗ HPV ಯಿಂದ ಉಂಟಾಗುವ ಕ್ಯಾನ್ಸರ್ ನಿಂದ ರಕ್ಷಿಸಲು ಸಹಾಯವಾಗುತ್ತದೆ.

## HPV ಲಸಿಕೆ ಕೆಲಸ ಮಾಡುತ್ತದೆ ಎಂದು ನಿಮಗೆ ಹೇಗೆ ಗೊತ್ತು?

HPV ಲಸಿಕೆ ಸಾಕಷ್ಟು ಚೆನ್ನಾಗಿ ಕೆಲಸ ಮಾಡುತ್ತದೆ. ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಸ್ವೀಡನ್‌ನಂತಹ ಹೆಚ್ಚಿನ HPV ಲಸಿಕೆ ಪ್ರಮಾಣವನ್ನು ಹೊಂದಿರುವ ದೇಶಗಳಲ್ಲಿ, ಗರ್ಭಕಂಠದ ಕ್ಯಾನ್ಸರ್‌ನ ಸಂಭವವು ಈಗಾಗಲೇ ಕಡಿಮೆಯಾಗಿದೆ. HPV ಲಸಿಕೆಗಳಲ್ಲಿ ಮುಖ್ಯವಾಗಿ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಯುವ ಸಾಮರ್ಥ್ಯ ಇರುತ್ತದೆ.

## HPV ಲಸಿಕೆ ಎಷ್ಟು ಕಾಲ ಉಳಿಯುತ್ತದೆ?

HPV ಲಸಿಕೆ ದೀರ್ಘಾವಧಿಯ ರಕ್ಷಣೆ ನೀಡುತ್ತದೆ. HPV ಲಸಿಕೆಯ ಪರಿಣಾಮವು ಮಧ್ಯಾವಸ್ಥೆಯವರೆಗೂ ಇರುತ್ತದೆ ಎಂದು ಸೂಚಿಸಲು ಸಾಕಷ್ಟು ಪುರಾವೆಗಳಿವೆ. ವಯಸ್ಸಾದಂತೆ ಲಸಿಕೆಯ ರಕ್ಷಣೆ ಕಡಿಮೆಯಾಗುತ್ತದೆ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ. HPV ವಿರುದ್ಧ ರಕ್ಷಣೆ ಎಷ್ಟು ಕಾಲ ಇರುತ್ತದೆ ಮತ್ತು ಬೂಸ್ಟರ್ ಲಸಿಕೆ ಅಗತ್ಯವಿದೆಯೇ ಎಂಬುದರ ಕುರಿತು ಸಂಶೋಧನೆ ನಡೆಯುತ್ತಿದೆ.

## HPV ಲಸಿಕೆಗಾಗಿ ನಾನು ಪಾವತಿಸಬೇಕೇ?

[ವೈದ್ಯರಿಗೆ ಮಾಹಿತಿ: 2023 ರಲ್ಲಿ, HPV ಲಸಿಕೆಯನ್ನು ಯುನಿವರ್ಸಲ್ ಇಮ್ಯುನೈಸೇಶನ್ ಪ್ರೋಗ್ರಾಂ (UIP) ನಲ್ಲಿ ಸೇರಿಸುವ ನಿರೀಕ್ಷೆಯಿದೆ. ಒಂದು ವೇಳೆ ನಿಮ್ಮ ರಾಜ್ಯದಲ್ಲಿ UIP ಮೂಲಕ ಲಭ್ಯವಿದ್ದರೆ, ಆಗ UIP ಕಾರ್ಯಕ್ರಮದ ಪ್ರಕಾರ ಅದನ್ನು ತೆಗೆದುಕೊಳ್ಳುವ ಹುಡುಗಿಯರಿಗೆ ಯಾವುದೇ ಶುಲ್ಕವಿರಬಾರದು ಅಥವಾ ಕನಿಷ್ಠ ಶುಲ್ಕವಿರಬೇಕು.]

ಹೌದು, ನೀವು ಲಸಿಕೆಗಾಗಿ ಶುಲ್ಕ ನೀಡಬೇಕಾಗುತ್ತದೆ . HPV ಲಸಿಕೆ ಇಂದು ________ರೂ.ಗೆ ಲಭ್ಯವಿರುತ್ತದೆ. ನನಗೆ ಈ ವೆಚ್ಚ ನಂತರದ ಕ್ಯಾನ್ಸರ್ ಚಿಕಿತ್ಸೆಯ ವೆಚ್ಚಗಳಿಗೆ ಹೋಲಿಸಿದರೆ ಬಹಳ ಕಡಿಮೆ ಅನಿಸುತ್ತದೆ.

## ಮದುವೆಯ ನಂತರ ಆಕೆ ಲಸಿಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೇ?

ಲಸಿಕೆಗೂ ಮದುವೆಗೂ ಯಾವುದೇ ಸಂಬಂಧವಿಲ್ಲ, ಇದು ಇರುವುದು ಕ್ಯಾನ್ಸರ್ ತಡೆಗಟ್ಟಲು. HPV ಲಸಿಕೆಯು ಚಿಕ್ಕ ವಯಸ್ಸಿನಲ್ಲಿ ನೀಡಿದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ, ಇದು ಹೆಚ್ಚಿನ ರೋಗನಿರೋಧಕ ಶಕ್ತಿಯನ್ನು ಉಂಟುಮಾಡುತ್ತದೆ ಮತ್ತು ಲೈಂಗಿಕ ಚಟುವಟಿಕೆಯ ಮೂಲಕ ವ್ಯಕ್ತಿಯು ಸೋಂಕಿಗೆ ಒಳಗಾಗುವ ಮೊದಲು ಕೊಡುವುದೇ ಉತ್ತಮ.

## ನಿಮ್ಮ ಮಕ್ಕಳು HPV ಲಸಿಕೆಯನ್ನು ಪಡೆಯಲು ನೀವು ಬಯಸುವಿರಾ?

ಹೌದು, ನಾನು ನನ್ನ ಮಕ್ಕಳಿಗೆ (ಅಥವಾ ಮೊಮ್ಮಕ್ಕಳಿಗೆ ) HPV ಲಸಿಕೆಯನ್ನು ಹಾಕಿಸಿದ್ದೇನೆ. ಏಕೆಂದರೆ ಇದು ತುಂಬಾ ಸುರಕ್ಷಿತವೆಂದು ಪರಿಗಣಿಸಲಾಗಿದೆ ಮತ್ತು ಕ್ಯಾನ್ಸರ್ ನಿಂದ ಅವರನ್ನು ರಕ್ಷಿಸುತ್ತದೆ. ಅಥವಾ ನಾನು 9-14 ವರ್ಷ ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳನ್ನು ಹೊಂದಿದ್ದರೆ, ಲಸಿಕೆ ಹಾಕಿಸುವ ಮೂಲಕ ಭವಿಷ್ಯದ ಕ್ಯಾನ್ಸರ್‌ಗಳಿಂದ ಅವರನ್ನು ರಕ್ಷಿಸಲು ಸಹಾಯ ಮಾಡಲಿದ್ದೇನೆ.

## ನನ್ನ ಸ್ನೇಹಿತನ ಮಗಳಿಗೆ ಲಸಿಕೆ ಹಾಕಿದ ನಂತರ ತುಂಬಾ ಅಡ್ಡ ಪರಿಣಾಮ ಆಯಿತು. ನಾನು ಈ ಬಗ್ಗೆ ಚಿಂತಿಸಬೇಕೇ?

ನೀವು ಈ ಬಗ್ಗೆ ಚಿಂತಿಸುತ್ತಿರಬೇಕು ಎಂದು ನನಗೆ ತಿಳಿದಿದೆ. ನನಗೆ ತಿಳಿದ ಮಟ್ಟಿಗೆ, HPV ಲಸಿಕೆ ಮಾರುಕಟ್ಟೆಯಲ್ಲಿ ಹೆಚ್ಚು ಅಧ್ಯಯನ ಮಾಡಲಾದ ಔಷಧಿಗಳಲ್ಲಿ ಒಂದಾಗಿದೆ ಮತ್ತು ಈ ಅಧ್ಯಯನಗಳು ಇದು ತುಂಬಾ ಸುರಕ್ಷಿತವಾಗಿದೆ ಎಂದು ತೋರಿಸುತ್ತವೆ. ಒಬ್ಬ ಚಿಕಿತ್ಸಕರಾಗಿ, ಈ ತಡೆಗಟ್ಟಬಹುದಾದ ಗರ್ಭಕಂಠದ ಕ್ಯಾನ್ಸರ್‌ನಿಂದಾಗಿ ಭಾರತದಲ್ಲಿ ಪ್ರತಿ 8 ನಿಮಿಷಕ್ಕೆ ಒಬ್ಬ ಮಹಿಳೆ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಿರುವುದನ್ನು ನೋಡಲು ಬಹಳ ದುಃಖವಾಗುತ್ತದೆ. 9 ಮತ್ತು 14 ವಯಸ್ಸಿನ ನಡುವಿನ HPV ಲಸಿಕೆ ನಿಮ್ಮ ಮಗಳಿಗೆ ಗರ್ಭಕಂಠದ ಮತ್ತು ಇತರ HPV ಕ್ಯಾನ್ಸರ್ಗಳ ವಿರುದ್ಧ ಉತ್ತಮ ರಕ್ಷಣೆ ನೀಡುತ್ತದೆ.

## ಮೂಲಗಳು


1. FOGSI Gynaecologic Oncology Committee. FOGSI GCPR Screening and Management of Preinvasive Lesions of Cervix and HPV Vaccination. [Internet]. 2018 Jan [cited 2023 Mar 14]. Available from: https://www.fogsi.org/wp-content/uploads/2018/03/FOGSI-GCPR-March-2018-final.pdf

2. Indian Academy of Pediatrics. IAP Immunization Schedule 2021 [Internet]. 2021 [cited 2023 Mar 14]. Available from: https://acvip.org/professional/columns/iap-immunization-schedule-2020-2021-table-form

3. Ngan HYS, Garland SM, Bhatla N, Pagliusi SR, Chan KKL, Cheung ANY, et al. Asia Oceania Guidelines for the Implementation of Programs for Cervical Cancer Prevention and Control. J Cancer Epidemiol [Internet]. 2011 Apr 13 [cited 2023 Mar 14];2011:794861. Available from: https://www.ncbi.nlm.nih.gov/pmc/articles/PMC3083000/

4. World Health Organization. Human papillomavirus vaccines (HPV) [Internet]. [cited 2022 Sep 16]. Available from: https://www.who.int/teams/immunization-vaccines-and-biologicals/diseases/human-papillomavirus-vaccines-(HPV)

5. World Health Organization. Cervical cancer [Internet]. 2022 [cited 2022 Sep 16]. Available from: https://www.who.int/news-room/fact-sheets/detail/cervical-cancer

6. National Cancer Institute. HPV and Cancer [Internet]. 2022 [cited 2022 Sep 16]. Available from: https://www.cancer.gov/about-cancer/causes-prevention/risk/infectious-agents/hpv-and-cancer

7. World Health Organization. Safety of HPV vaccines: Extract from report of GACVS meeting of 7-8 June 2017 [Internet]. 2017 Jul [cited 2022 Sep 21]. (Weekly Epidemiological Record). Available from: https://www.who.int/groups/global-advisory-committee-on-vaccine-safety/topics/human-papillomavirus-vaccines/safety

8. Centers for Disease Control and Prevention. HPV Vaccine Is Safe and Effective [Internet]. 2019 [cited 2022 Sep 21]. Available from: https://www.cdc.gov/hpv/parents/vaccinesafety.html

9. World Health Organization. Questions and Answers About Human Papillomavirus (HPV) [Internet]. 2020 [cited 2022 Sep 20]. Available from: https://cdn.who.int/media/docs/librariesprovider2/default-document-library/who-hpv-qa.pdf?sfvrsn=d0bf716b_3

10. Torjesen I. HPV vaccine cut cervical cancer rates in England by 87%. BMJ [Internet]. 2021 Nov 5 [cited 2022 Sep 21];37(n2689). Available from: https://www.bmj.com/content/375/bmj.n2689

11. Markowitz LE, Schiller JT. Human Papillomavirus Vaccines. J Infect Dis [Internet]. 2021 Oct 1 [cited 2022 Sep 21];224(Supplement_4):S367–78. Available from: https://doi.org/10.1093/infdis/jiaa621

12. Centers for Disease Control and Prevention. HPV Vaccine Safety and Effectiveness Data [Internet]. 2021 [cited 2022 Sep 21]. Available from: https://www.cdc.gov/hpv/hcp/vaccine-safety-data.html


ಪ್ರಿವೆಂಟ್ ಗ್ಲೋಬಲ್ HPV ಕ್ಯಾನ್ಸರ್ಸ್ ಒಂದು ಸಹಯೋಗದ ಕಾರ್ಯಕ್ರಮವಾಗಿದ್ದು,ಇದನ್ನು ಅಮೆರಿಕನ್ ಕ್ಯಾನ್ಸರ್ ಸೊಸೈಟಿಯ ಗ್ಲೋಬಲ್ HPV ಕ್ಯಾನ್ಸರ್ ಫ್ರೀ ಪ್ರೋಗ್ರಾಮ್ ಮೂಲಕ ಬೆಂಬಲಿಸಲಾಗುತ್ತದೆ.

PreventGlobalHPVCancers.org



ಮಾಡೆಲ್ ಗಳ ಬಳಕೆಯನ್ನು ಉದಾಹರಣೆಯಾಗಿ ಮಾತ್ರ ಉಪಯೋಗಿಸಲಾಗಿದೆ. ಕೊನೆಯ ಪರಿಷ್ಕರಣೆ ಏಪ್ರಿಲ್ 2023 ರಂದು ಆಗಿತ್ತು.